ಶ್ರೀ ಹೆಚ್. ಎನ್. ನಂಜೇಗೌಡ.—ನಂಸ್ಥಾನದಲ್ಲಿ ಕೆಲವು ಸ್ಕೀಂಗಳು ಮುಂಜೂರಾಗಿದ್ದರೂ, ಹಳೇ ಮೈಸೂರಿನಲ್ಲಿ ಒಂದು ಸ್ಕೀಂ ಆಗಿಲ್ಲ. ಅದರಲ್ಲೂ ನನ್ನ ಕ್ಷೇತ್ರದಲ್ಲಿ ಖಚಿತವಾಗಿ ಮುಂಜೂರಾತಿಗೆ ಫೀಸಿಬಿಲಿಟಿ ಸರ್ಟಿಫಿಕೇಟ್ ಕೊಟ್ಟಿದ್ದರೂ ಕೂಡ ಮುಂಜೂರು ಮಾಡಿಲ್ಲ. ಅಲ್ಲ ಕಾಂಗ್ರೆಸ್ ಸೋತದ್ದೇ ಇದಕ್ಕೆ ಕಾರಣವೇ ?

ಶ್ರೀ ವೀರೇಂದ್ರ ಪಾಟೀಲ್.—ಕಾಂಗ್ರೆಸ್ ಸೋತದ್ದು ಜನವರಿ, ಫೆಬ್ರವರಿಯಲ್ಲಿ, 3-4 ತಿಂಗಳಾಯಿತು. ಮಾನ್ಯ ಸದಸ್ಯರು ಹೇಳುತ್ತಾ ಇರುವುದು ಎಂದಿನದು ಎಂಬುದು ನನಗೆ ಗೊತ್ತಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ಹೊಸ ಮೈಸೂರಿನ ಭಾಗದಲ್ಲಿ ಫೀಜಿಬಿಲಿಟಿ ಇದ್ದು ಹಳೇ ಮೈಸೂರಿನ ಭಾಗದಲ್ಲಿ ಫೀಜಿಬಿಲಿಟಿ ಇಲ್ಲ ಎಂದರೆ ಇದು ಸರಿಯೇ ?

2-00 P. M.

ಶ್ರೀ ವೀರೇಂದ್ರ ಪಾಟೀಲ್.—ನೀರಾವರಿ ಯೋಜನೆಗಳನ್ನು ಕೈಗೊಳ್ಳುವುದರಲ್ಲಿ ಇದು ನನ್ನ ಕ್ಷೇತ್ರ ಇದು ನಿಮ್ಮ ಕ್ಷೇತ್ರ ಎಂಬ ಮಾತುಗಳು ಬರುವುದೇ ಇಲ್ಲ. ಫೀಜಿಬಲ್ ಆಗದ ಕೆಲಸಗಳು ಅವು ಅಪ್ಪರ್‌ಕೃಷ್ಣಾ ವ್ಯಾಲಯಲ್ಲೇ ಇರಲಿ ಕಾವೇರಿ ವ್ಯಾಲಯಲ್ಲೇ ಇರಲಿ ಅವುಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ.

ಶ್ರೀ ಎಲ್. ಶ್ರೀಕಂಠಯ್ಯ.—1924 ನೆ ಅಗ್ರಿಮೆಂಟಿನಿಂದ ತೊಂದರೆಯುಂಟಾಗಿದೆ ಎಂದು ಹೇಳಲಾಯಿತು. Will you invoke the term, "substantial change in circumstances" and reconsider the 1924 Agreement ? ಆ 1924ರ ಅಗ್ರಿಮೆಂಟನ್ನು ಉಲ್ಲಂಘನೆಮಾಡುವುದಕ್ಕೆ ಪರಿಶೀಲನೆ ಮಾಡಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್.—ಒಮ್ಮೆ ಅಂಗ್ರಿಮೆಂಟಾದಮೇಲೆ ಅದನ್ನು ಪುನಃ ಹೇಗೆ ಉಲ್ಲಂಘನೆ ಮಾಡಬೇಕು ಎಂಬುದು ನನಗೆ ಗೊತ್ತಾಗುವುದಿಲ್ಲ. ಈಗ ಪರಿಯನ್ನು ತರಿಸಿ ಇರತಕ್ಕ ಅನಾನುಕೂಲಗಳನ್ನು ಹೇಗೆ ಪರಿಹರಿಸಬೇಕು ಎನ್ನುವುದಕ್ಕೆ ಒಂದು ಸ್ಕ್ಯಾಂಡನ್ನು ತೆಗೆದು ಕೊಳ್ಳಬೇಕೆಂಬುದನ್ನು ಪೂರ್ಣವಾಗಿ ಪರಿಶೀಲನೆ ಮಾಡಲಾಗುತ್ತಿದೆ.

ಅಧ್ಯಕ್ಷರು.—ಪ್ರಶ್ನೋತ್ತರಗಳ ಕಾಲ ಮುಗಿಯಿತು. ಈಗ ಅಲ್ಪಕಾಲಾವಧಿಯ ಪ್ರಶ್ನೆ.

———

SHORT NOTICE QUESTION AND ANSWER

Ninth and Tenth Generators of Sharavathy Valley Project

Q.—45. Sri H. C. LINGA REDDY (Malur).—

Will the Minister for Public Works be pleased to state :—

(*a*) the stage at which the ninth and tenth generators of the Sharavathy Valley Project stands at present ;

(*b*) whether they are in a position to secure the machinery and equipment required for the purpose immediately and if so, when ;

(*c*) the reason for the delay in commissioning these units ;

(*d*) when the same would be commissioned ?

A.—Sri VEERENDRA PATIL (Minister for Public Works).—

(*a*) The project report is before the Government of India.

(*b*) and (*c*) Does not arise.

(*d*) It is proposed to commission these units during the years 1969-70 and 1970-71.

Sri H. C. LINGA REDDY.—You have stated that the project report is before the Government of India. May I know how long it is before the Government of India and the efforts made by the State Government to have the matter expedited, as also the reasons for the delay ?

Sri VEERENDRA PATIL.—That way, I do not think there is any delay. We have referred it to the Government of India and we have requested them to give clearance to these 9th and 10th units. According to our programme, we have to commission the IX Unit during 1970 and the X unit during 1970-71. The question is whether we have to procure the equipment from where we secured it for the II Stage of Sharavathi or we have to procure it from indigenous sources. That question is before the Government. The Government of India are insisting that we should procure this equipment from the Heavy Electricals, Bhopal.

Sri H. C. LINGA REDDY.—I wanted to know the period during which this report is pending before the Central Government.

Sri VEERENDRA PATIL.—I should like to have notice.

Sri C. K. RAJAIAH SHETTY.—May I know the present stage ? How many generators are working ? Are the authorities working in accordance with schedule ?

Sri VEERENDRA PATIL.—Two Units have already been commissioned. The third and the fourth units have been erected but testing is going on. There appears to be some difficulty about them ; I don't know whether it is in respect of alignment, etc. The experts have come very recently from America and they are testing those machines. We expect to commission the IV and V Units during the current year.

Sri S. SIVAPPA.—After their installation, what is the time that has elapsed ?

Sri VEERENDRA PATIL.—About four to six months.

ಶ್ರೀ ಎಚ್. ಡಿ. ದೇವೇಗೌಡ.—ಕೇಂದ್ರ ಸರ್ಕಾರದವರು ನಮಗೆ ಬೇಕಾಗುವ ಜನರೇಟರು ಗಳನ್ನು ಆ ಭೂಪಾಲಿನಿಂದಲೇ ಕೊಳ್ಳಬೇಕೆಂದು ಒತ್ತಾಯ ಮಾಡುತ್ತಿದ್ದಾರೆಂದು ಹೇಳರಾಯಿತು. ಆದರೆ, ಈ ವಿಚಾರದಲ್ಲಿ ನಮ್ಮ ತಜ್ಞರ ಅಭಿಪ್ರಾಯವೇನು ?

ಶ್ರೀ ವೀರೇಂದ್ರ ಪಾಟೀಲ್.—ಭೂಪಾಲಿನಲ್ಲಿ ಸುಮಾರು 20.90 ಕೋಟಿ ರೂಪಾಯಿಗಳನ್ನು ಇನ್‌ವೆಸ್ಟ್‌ಮಾಡಿ ಕಾರ್ಖಾನೆಯನ್ನು ಸ್ಥಾಪಿಸಿದ್ದಾರೆ. ಆದುದರಿಂದ ಅವರು ಅಲ್ಲಿ ತಯಾರು ಮಾಡ ತಕ್ಕ ಸಾಮಾನುಗಳನ್ನೇ ಕೊಳ್ಳಬೇಕೆಂದು ಹೇಳುತ್ತಿದ್ದಾರೆ. ಎರಡನೇ ಕಡೆ ಹೋದರೆ, ಎಕ್ಸ್ ಛೇಂಜಿಗೆ ತೊಂದರೆ ಆಗಬಹುದು ಎಂದು ಅವರು ಹೇಳುತ್ತಾರೆ ಇನ್ನೂ ಈಗತಾನೆ ಅಲ್ಲಿ ಈ ಯಂತ್ರಗಳನ್ನು ತಯಾರುಮಾಡುತ್ತಿರುವುದರಿಂದ ನಮ್ಮಮೇಲೆ ಎಕ್ಸ್‌ಪೆರಿಮೆಂಟ್ ಮಾಡಬೇಡಿ ನಮಗೆ ಎರಡನೇ ಮೆಷೀನ್ ಬೇಕಾದರೆ ಅವುಗಳನ್ನು ಇಲ್ಲೇ ತೆಗೆದುಕೊಳ್ಳುತ್ತೇವೆ, ಈ ವಿಚಾರದಲ್ಲಿ ನಮ್ಮನ್ನು ಒತ್ತಾಯಮಾಡಬೇಡಿ ಎಂದು ನಾವು ಅವರನ್ನು ಕೋರಿದ್ದೇವೆ.

Sri M. A. AMALORPAVAM.—Will the Hon'ble Minister be pleased to enlighten the House how much power is expected from the 9th and 10th Units when they are commissioned ?

Sri VEERENDRA PATIL.—Sir, every Unit will generate 89.1 M.W. of power.

Sri C. K. RAJAIAH SETTY.—You have got two generators from America. May I know with which different companies you have placed orders?

Sri VEERENDRA PATIL —Second stage generator we are getting from America. Now the question is from where we have to get the turbines and generators; that has not been decided.

ಶ್ರೀ ಎಚ್. ಬಿ. ಜ್ವಾಲನಯ್ಯ.— 2ನೇ ಜನರೇಟರ್ ಮತ್ತು 4ನೇ ಜನರೇಟರ್‌ನಲ್ಲಿ ಮೂರನೇ ಜನರೇಟರ್ ಪೂರ್ತಿ ಕೆಟ್ಟುಹೋಗಿ, ಅದನ್ನು ಅಪರೇಟ್ ಮಾಡುವುದಕ್ಕೆ ಸಾಧ್ಯವಿಲ್ಲವೆಂಬುದು ಸರಿಯೇ ?

ಶ್ರೀ ವೀರೇಂದ್ರ ಪಾಟೀಲ್.—ನಾನು ಹೇಳಿದೆ, ಸಲ್ಪಮಟ್ಟಿಗೆ ವೈಬ್ರೇಟ್ ಆಗುತ್ತದೆ ಎಂದು. ಏನಾದರೂ ಅರೈನ್‌ಮೆಂಟ್ ಡಿಫೆಕ್ಟ್ ಇದೆಯೋ ಏನೊ. ಸಪ್ಲೈ ಮಾಡಿದಂತಹ ಅಮೇರಿಕನ್ ಫರ್ಮ್‌ನವರು ಟಾಪ್ ಇಂಜಿನಿಯರ್‌ನನ್ನು ಕಳಿಸಿದ್ದಾರೆ. ಮೊನ್ನೆ 2-3 ದಿವಸದ ಹಿಂದೆ ಅವರು ಶರಾವತಿಗೆ ಹೋಗಿದ್ದಾರೆ, ಈಗ ಅದನ್ನು ನೋಡುತ್ತಿದ್ದಾರೆ.

ಶ್ರೀ ಎಸ್. ಶಿವಪ್ಪ.—ತಾವು ಹೇಳಿದ್ದೀರಿ ಸ್ವಲ್ಪಮಟ್ಟಿನ ವ್ಯತ್ಯಾಸವಾದಂಥದ್ದು. ಅದು 6 ತಿಂಗಳಿಂದ ಈಚೆಗೆ ನಿಂತು ಅದರಿಂದಾಗಿ ದೇಶದ ಖಜಾನೆಗೆ ಒಂದು ದಿವಸಕ್ಕೆ ಎಷ್ಟು ನಷ್ಟವಾಗುತ್ತದೆ ಹೇಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಅದರ ಲೆಕ್ಕ ಹಾಕಿ ಹೇಳುವುದಕ್ಕಾಗುವುದಿಲ್ಲ. ಅದು ನಿಂತು ಬಹುಶಃ 4-5 ತಿಂಗಳಾಗಿರಬಹುದು. ಒಂದು ಒಂದೂವರೆ ತಿಂಗಳು ಚೆಸ್ಟಿಂಗ್‌ಗೆ ನಲ್ಲುತ್ತದೆ. ಅದನ್ನು ಬಿಟ್ಟು 3-4 ತಿಂಗಳ ತಡವಾಗಿರುವುದನ್ನು ಒಪ್ಪಿಕೊಳ್ಳುತ್ತೇನೆ. ಒಂದು ಸಲ ಸರಿ ಹೋದರೆ ಮತ್ತು ಇನ್ನು ಬೇರೆ ಏನಾದರೂ ಆದರೆ ಮೆಷೀನಿಗೆ ಧಕ್ಕೆ ಬಂದರೆ ನಷ್ಟವಾಗುತ್ತದೆ. ವೈಬ್ರೇಟರ್‌ನಲ್ಲಿ ಡಿಫೆಕ್ಟ್ ಇದೆ ಎಂದು ನಮ್ಮ ಇಂಜಿನಿಯರ್ಸ್ ತಿಳಿಸಿದ ಮೇರೆ ನಾವು ಕಮಿಷನ್ ಮಾಡುವುದಕ್ಕೆ ತಯಾರಿಲ್ಲ, ನೀವು ಅದನ್ನು ಸರಿಪಡಿಸಬೇಕೆಂದು ಅವರಿಗೆ ಹೇಳಿದ್ದೇವೆ. ಅದಕ್ಕೆ ಟಾಪ್ ಇಂಜಿನಿಯರ್ಸ್ ಬಂದಿದ್ದಾರೆ. ಬೇಗನೆ ಅವರಿಂದ ಸರಿಹೋಗಬಹುದೆಂದು ತಿಳಿಯುತ್ತೇನೆ.

Sri A. R. BADRI NARAYAN.—Sir, when do Governmett expect the clearance from Government of India and what are the impediments causing the delay?

Sri VEERENDRA PATIL.—Sir, I have already said there is no impediment. The only thing is, they are insisting that we should purchase the turbines and generators from the Heavy Electricals, Bhopal. We do not want to do it because they are not in a position to supply these equipments by 69-70 and 70-71. So, we want to import this machinery from outside.

ಶ್ರೀ ಎಸ್. ಶಿವಪ್ಪ.—ಈಗ 5 ತಿಂಗಳಿಂದ 3-4 ಜನರೇಟರನ್ನು ತಾವು ಸರಿಮಾಡದಿರುವುದರಿಂದ ಅದರಿಂದ ಸರ್ಕಾರಕ್ಕೆ ಎಷ್ಟು ಹಣ ನಷ್ಟವಾಯ್ತು ಅದಕ್ಕೆ ತಮ್ಮ ಉತ್ತರ ಬೇರೆ ರೀತಿ ಇದೆ. ಇದರಿಂದ ಮೈಸೂರು ಖಜಾನೆಗೆ ಬರಬೇಕಾದ 7 -80 ಲಕ್ಷ ರೂಪಾಯಿಗಳಿಗೆ ಯಾರು ಜವಾಬ್ದಾರಿ ?

ಶ್ರೀ ವೀರೇಂದ್ರ ಪಾಟೀಲ್.—ಅವರು ಯಾವ ಲೆಕ್ಕದಿಂದ ಹೇಳುತ್ತಿದ್ದಾರೆಂದು ನನಗೆ ಗೊತ್ತಿಲ್ಲ. ದಿನಾಲೂ ಜನರೇಟರ್ ನಡೆಸಿದರೆ ಎಷ್ಟು ಇನ್‌ಕಂ ಬರುತ್ತದೆ ಎಂಬುದು ನಾನು ವಿಚಾರಿಸಿ ಹೇಳಬೇಕಾಗುತ್ತದೆ.

ಶ್ರೀ ಎಚ್. ಸಿದ್ಧವೀರಪ್ಪ.—ಇದುವರೆಗೆ ಏನು ಪವರ್ ಜನರೇಷ್ ಆಗಿದೆ, ಅದು ಆಕ್ಚುವಲ್ಲಿ ಖರ್ಚುಮಾಡುತ್ತಿದ್ದೀರಾ, ಅಥವಾ ಅದರಲ್ಲಿ ಎಷ್ಟು ಅರೇಬಿಯನ್ ಸಮುದ್ರಕ್ಕೆ ಹೋಗಿದೆ ?

Sri VEERENDRA PATIL.—Notice, Sir.